# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1289 |
| ಸದಸ್ಯರ ಹೆಸರು | ಡಾ: ಎಂ.ಜಿ.ಮುಳೆ |
| ಉತ್ತರಿಸುವ ದಿನಾಂಕ | 19.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳಲ್ಲಿ ಎಷ್ಟು ವರ್ಗಗಳಿವೆ; ಒಂದೊಂದು ವರ್ಗದಲ್ಲೂ ಎಷ್ಟು ದೇವಾಲಯಗಳಿವೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಪ್ರಸ್ತುತ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೆ ಒಳಪಟ್ಟಿರುವ ಒಟ್ಟು 34,565 ದೇವಾಲಯಗಳಿದ್ದು, ಈ ವರ್ಗವಾರು ದೇವಾಲಯಗಳ ವಿವರ ಈ ಕೆಳಕಂಡಂತಿದೆ<br><br>ಪ್ರವರ್ಗ | ಸಂಸ್ಥೆಗಳ ಸಂಖ್ಯೆ<br>ಎ | 205<br>ಬಿ | 193<br>ಸಿ | 34167<br>ಒಟ್ಟು | 34565<br><br>ಜಿಲ್ಲಾವಾರು ಮಾಹಿತಿಯನ್ನು ಸಿ.ಡಿ. ರೂಪದಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಮುಜರಾಯಿ ದೇವಾಲಯಗಳಲ್ಲಿ ಅರ್ಚಕರು ಮತ್ತು ಇತರ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು; ಮತ್ತು ಅವರಿಗೆ ನೀಡುವ ವೇತನ ಮತ್ತಿತರ ಸೌಲಭ್ಯಗಳೇನು; (ಎಲ್ಲಾ ವರ್ಗದವರ ದೇವಾಲಯದ ಮಾಹಿತಿ ನೀಡುವುದು)</td><td>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ದೇವಾಲಯಗಳಲ್ಲಿ ಒಟ್ಟು 13,620 ಅರ್ಚಕರು ಮತ್ತು ಇತರೆ ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br><br>ಮುಜರಾಯಿ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ಇತರೆ ಸಿಬ್ಬಂದಿ ವರ್ಗದವರ ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ.<br><br>ಇವರಿಗೆ ನೀಡುವ ವೇತನ ಮತ್ತು ಇತರ ವಿವರಗಳು ಕೆಳಕಂಡಂತಿದೆ:<br><br>➢ ಇಲಾಖೆಯ ಕಾಯ್ದೆ ಮತ್ತು ನಿಯಮಗಳು ಜಾರಿಗೆ ಬರುವ ಪೂರ್ವದಲ್ಲಿಯೇ ಸರ್ಕಾರಿ ವೇತನ ಶ್ರೇಣಿಯನ್ನು ಪಡೆದು ಕೆಲವು ಪ್ರಮುಖ ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅರ್ಚಕರು 6ನೇ ವೇತನ ಶ್ರೇಣಿಯಂತೆ ವೇತನ ಪಡೆಯುತ್ತಿದ್ದಾರೆ.<br><br>➢ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು 2002ರ ನಿಯಮ 8 (2)ರನ್ವಯ ವೇತನವನ್ನು ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರಿಗೆ ರೂ.11,600-24,600 (ಪ್ರವರ್ಗ-1) ಮತ್ತು ರೂ.7,275-</td></tr>
</table>

| ಪ್ರಶ್ನೆ | ಉತ್ತರ |
|---|---|

17,250 (ಪ್ರವರ್ಗ-2) ವೇತನ ಶ್ರೇಣಿಯಂತೆ ಮಾಸಿಕ ವೇತನ ನೀಡಲಾಗುತ್ತಿದೆ.

- ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಕಲಂ 36 (2) (1) (i) ರನ್ವಯ ಅಧಿಸೂಚಿತ ಸಂಸ್ಥೆಗಳ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿಕೊಂಡು ಸಂಸ್ಥೆಯ ಅಥವಾ ದತ್ತಿಯ ಧ್ಯೇಯೋದ್ದೇಶಗಳ ಮತ್ತು ಅಲ್ಲಿನ ಸೇವೆಗಳ ಸೂಕ್ತ ನಿರ್ವಹಣೆಗೆ ಹಾಗೂ ಅನುಸೂಚಿತ ದಿಟ್ಟಂ ಸಾಮಾಗ್ರಿಗಳು ಮತ್ತು ಪೂಜೆ ಮತ್ತು ಹರಕೆಗಳಿಗೆ ಅಗತ್ಯವಾಗುವ ಇತರ ವಸ್ತುಗಳಿಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಪ್ರಮಾಣದ ಅವುಗಳ ವೆಚ್ಚವು ಸೇರಿದಂತೆ ಅಂಥ ಸೇವೆಗಳಿಗೆ ಸಂಬಂಧಿಸಿದ ಸಂಭಾವನೆಗೆ ಅವಕಾಶ ಕಲ್ಪಿಸಿಕೊಂಡು ಆಯಾಯ ದೇವಾಲಯಗಳ ಪೂಜಾ ಸಾಮಗ್ರಿಗಳ ನಿರ್ವಹಣೆಗೆ ಹಣ ಪಾವತಿಸಲಾಗುತ್ತದೆ.

- ಪ್ರಸಕ್ತ, ಸರ್ಕಾರದ ಆದೇಶ ಸಂಖ್ಯೆ: ಕಂಇ 142 ಮುಆಬಿ 2022, ದಿನಾಂಕ:11.04.2022ರಂತೆ, ವಾರ್ಷಿಕ ರೂ.60,000/-ಗಳ ತಸ್ತೀಕ್ ಮೊತ್ತವನ್ನು ಪರಿಷ್ಕರಿಸುವಂತೆ ಬೇಡಿಕೆ/ಪ್ರಸ್ತಾವನೆ ಸ್ವೀಕೃತವಾದ ಕಾರಣ, 2025-26ನೇ ಸಾಲಿನ ಆಯವ್ಯಯ ಕಂಡಿಕೆ-435 ರಲ್ಲಿ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ 25,551 ಧಾರ್ಮಿಕ ಸಂಸ್ಥೆಗಳ/ದೇವಾಲಯಗಳಲ್ಲಿರುವ ಅರ್ಚಕರಿಗೆ ಪ್ರಸ್ತುತ ಪಾವತಿಸುತ್ತಿರುವ ವಾರ್ಷಿಕ ತಸ್ತೀಕ್ ಮೊತ್ತವನ್ನು ರೂ.60,000/-ಗಳಿಂದ ರೂ.72,000/-ಗಳಿಗೆ ಹೆಚ್ಚಿಸುವುದಾಗಿ ಘೋಷಿಸುವ ಮೂಲಕ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 'ಸಿ' ದರ್ಜೆ ದೇವಸ್ಥಾನಗಳ ಅರ್ಚಕರುಗಳಿಗೆ ಅನುಕೂಲ ಮಾಡಿಕೊಡಲಾಗಿದೆ.

| ಕ್ರ ಸಂ | ಸರ್ಕಾರದ ಆದೇಶಗಳು | ಪರಿಷ್ಕರಿಸಲಾದ ವಾರ್ಷಿಕ ತಸ್ತೀಕ್ ಮೊತ್ತ (ರೂ.ಗಳಲ್ಲಿ |
|---|---|---|
| 1. | ಕಂಇ 03 ಮುತಬ 2006, ದಿನಾಂಕ:29.06.2006 | 6,000.00 |
| 2. | ಕಂಇ 04 ಮುತಬ 2010, ದಿನಾಂಕ:14.09.2010 | 12,000.00 |
| 3. | ಕಂಇ 10 ಮುತಬ 2012, ದಿನಾಂಕ:21.06.2013 | 24,000.00 |
| 4. | ಕಂಇ 02 ಮುತಬ 2011, ದಿನಾಂಕ:25.08.2015 | 36,000.00 |
| 5. | ಕಂಇ 04 ಮುತಬ 2017, ದಿನಾಂಕ:12.04.2017 | 48,000.00 |
| 6. | ಕಂಇ 142 ಮುಆಬಿ 2022, ದಿನಾಂಕ:11.04.2022 | 60,000.00 |

- ಸದರಿ ಕಾಯ್ದೆಗೆ ಅನುಗುಣವಾಗಿ ಧಾರ್ಮಿಕ ಸಂಸ್ಥೆಯು ಅಸ್ತಿತ್ವದಲ್ಲಿ ಇದ್ದು, ಪ್ರತಿ ನಿತ್ಯ ಪೂಜಾ ಕೈಂಕರ್ಯಗಳನ್ನು ನೆರವೇರುತ್ತಿರುವುದನ್ನು ಖಾತರಿಪಡಿಸಿಕೊಂಡು ತಸ್ತೀಕ್ ಹಣವನ್ನು ಸಂಬಂಧಪಟ್ಟ ಅರ್ಚಕರಿಗೆ ನೀಡಲಾಗುತ್ತಿದೆ.

- ಅಲ್ಲದೇ ಅರ್ಚಕರಿಗೆ ತಟ್ಟೆಕಾಸು ಪಡೆಯುವ ಪದ್ಧತಿ ಇರುತ್ತದೆ.

| ಪ್ರಶ್ನೆ | ಉತ್ತರ |
|---|---|

- ಇದಲ್ಲದೇ ದೇವಾಲಯಗಳಲ್ಲಿ ತಟ್ಟೆಕಾಸನ್ನು ರೊಕ್ಕವೆಚ್ಚ ಅಥವಾ ಸೇವಾ ಕಮೀಷನ್ ಪಡೆಯಲು ನಿರಾಕರಿಸುವ ಅರ್ಚಕರು ವೇತನ ಶ್ರೇಣಿಯನ್ನು ಪಡೆಯಲು ಇಚ್ಛಿಸಿದ್ದಲ್ಲಿ ಅಂತಹ ಅರ್ಚಕರ ಹುದ್ದೆ ಮತ್ತು ದೇವಾಲಯದ ಆದಾಯಕ್ಕೆ ಅನುಗುಣವಾಗಿ ವೇತನ ಶ್ರೇಣಿಯನ್ನು ನೀಡಲಾಗುತ್ತದೆ.

- **ಆಯುಕ್ತರ ಆದೇಶ ಸಂಖ್ಯೆ: HRICE:ADM1/832/2023 E-1218664 ದಿನಾಂಕ: 27.10.2023** ರನ್ವಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಕೆಳಕಂಡಂತೆ ಪ್ರೋತ್ಸಾಹ ಧನವನ್ನು ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

| ಕ್ರ. ಸಂ | ಶೈಕ್ಷಣಿಕ ಹಂತ | ಪ್ರೋತ್ಸಾಹ ಧನ (ರೂ.ಗಳಲ್ಲಿ) |
|---|---|---|
| 1. | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) | 5,000/- |
| 2. | ಐ.ಟಿ.ಐ/ಜೆ.ಒ.ಸಿ/ಡಿಪ್ಲೋಮ | 5,000/- |
| 3 | ಪದವಿ ಶಿಕ್ಷಣ | 7,000/- |
| 4. | ಸ್ನಾತಕೋತ್ತರ ಪದವಿ ಶಿಕ್ಷಣ | 15,000/- |
| 5. | ಇತರೆ ವೈಧ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್, ಹೋಮಿಯೋಪತಿ ಮತ್ತು ಯುನಾನಿ) | 25,000/- |
| 6. | ವೈದ್ಯಕೀಯ / ಡೆಂಟಲ್ ಶಿಕ್ಷಣ | 50,000/- |
| 7. | ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್) | 25,000/- |
| 8. | ವಿದೇಶ ವ್ಯಾಸಂಗ | 1,00,000/- (ಒಂದು ಬಾರಿ ಮಾತ್ರ) |

- **ಆಯುಕ್ತರ ಆದೇಶ ಸಂಖ್ಯೆ: HRICE:ADM1/778/2023 E-1213475 ದಿನಾಂಕ: 27.10.2023** ರನ್ವಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರು ಸೇವೆಯಲ್ಲಿರುವಾಗಲೇ ಮರಣ ಹೊಂದಿದಲ್ಲಿ ಅವರ ಕುಟುಂಬದವರಿಗೆ ರೂ 2.00ಲಕ್ಷಗಳ ಪರಿಹಾರ ಧನವನ್ನು ಪಾವತಿಸಲಾಗುತ್ತಿದೆ.

- ಭಾರತ್‌ಗೌರವ್ ಯೋಜನೆ ಅಡಿಯಲ್ಲಿ ಇಲಾಖೆ ವತಿಯಿಂದ ಕೈಗೊಳ್ಳಲಾಗುವ ಕಾಶೀ-ಗಯಾ-ಆಯೋದ್ಯೆ ದರ್ಶನ, ದಕ್ಷಿಣ ಕ್ಷೇತ್ರ ಯಾತ್ರೆ ದ್ವಾರಕಯಾತ್ರೆಗಳಿಗೆ ಅರ್ಚಕರ ಹಾಗೂ ಅವರ ಕುಟುಂಬದ ಒಬ್ಬರು ಸದಸ್ಯರು ವರ್ಷದಲ್ಲಿ ಒಟ್ಟು 2,400 ಜನರಿಗೆ ಉಚಿತ ಯಾತ್ರೆ ಸೌಲಭ್ಯ ಕಲ್ಪಿಸಲಾಗಿದೆ ಇದಕ್ಕೆ ವಾರ್ಷಿಕ 8 ಕೋಟಿ ವೆಚ್ಚವಾಗಲಿದೆ.

- ಸರ್ಕಾರದ ಆದೇಶ ಸಂಖ್ಯೆ: ಕಂಇ31ಮುಸೇವಿ 2021 ಬೆಂಗಳೂರು, ದಿನಾಂಕ: 21/08/2021ರ ಆದೇಶ ದನ್ವಯ "ಸಿ" ವರ್ಗದ ದೇವಾಲಯಗಳ ಅನುವಂಶಿಕ ಅರ್ಚಕರ ನಿಧನರಾದ ನಂತರ ಅವರ ಕುಟುಂಬದವರನ್ನು ನೇಮಕಾತಿ ಮಾಡುವ ಅಧಿಕಾರವನ್ನು ಆಯಾಯ ತಾಲ್ಲೂಕುಗಳ ತಹಶೀಲ್ದಾರ್‌ರವರಿಗೆ ನೀಡಲಾಗಿದೆ.

| | ಪ್ರಶ್ನೆ | ಉತ್ತರ |
|---|---|---|
| | | ➢ ಸರ್ಕಾರದ ಆದೇಶ ಸಂಖ್ಯೆ: ಕಂಇ31ಮುಸೇವಿ 2021 ಬೆಂಗಳೂರು ದಿನಾಂಕ: 28/11/2023ರ ಆದೇಶದನ್ವಯ "ಸಿ" ವರ್ಗದ ದೇವಾಲಯಗಳ ಅನುವಂಶಿಕ ಅರ್ಚಕರು ತೀವ್ರ ಅನಾರೋಗ್ಯ ಹಾಗೂ ವಯಸ್ಸಾದ ಕಾರಣಕ್ಕೆ ಅವರ ಕುಟುಂಬದವರನ್ನು ನೇಮಕಾತಿ ಮಾಡುವ ಅಧಿಕಾರವನ್ನು ಆಯಾಯ ತಾಲ್ಲೂಕುಗಳ ತಹಶೀಲ್ದಾರ್‌ರವರಿಗೆ ನೀಡಿ ಆದೇಶಿಸಲಾಗಿದೆ.<br><br>➢ ಅರ್ಚಕರಿಗೆ ತಸ್ತೀಕ್ / ವರ್ಷಾಸನ ನೇರವಾಗಿ ಅರ್ಚಕರ ಖಾತೆಗೆ ಜಮಾ ಮಾಡಿ (DBT) ಪಾವತಿಸಲು ಕ್ರಮವಹಿಸಲಾಗುತ್ತಿದೆ . |
| ಇ) | ಹುಂಡಿಗಳಲ್ಲಿ ಸಂಗ್ರಹವಾಗುವ ಹಣವನ್ನು ಆಯಾ ದೇವಾಲಯಗಳಿಗೆ ಖರ್ಚು ಮಾಡಲಾಗುತ್ತಿದೆಯೇ ಅಥವಾ ಯಾವ ರೀತಿ ಖರ್ಚು ಮಾಡಲಾಗುವುದು (ವಿವರ ನೀಡುವುದು) | ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಸಂಸ್ಥೆಗಳಲ್ಲಿ ಭಕ್ತರು ನೀಡಿರುವ ಕಾಣಿಕೆ, ಹರಕೆ ಸೇವೆ ಇತ್ಯಾದಿಗಳ ಮೂಲಕ ಬರುವ ಆದಾಯವನ್ನು ಆಯಾಯ **ದೇವಾಲಯಗಳ ನಿಧಿಗೆ (ಬ್ಯಾಂಕ್ ಖಾತೆ) ಜಮಾ ಮಾಡಲಾಗುತ್ತಿದೆ.**<br><br>**ದೇವಾಲಯಕ್ಕೆ ಬರುವ ಯಾವುದೇ ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ಸಂದಾಯ ಮಾಡುವುದಿಲ್ಲ.**<br><br>ಧಾರ್ಮಿಕ ಇಲಾಖಾ ವ್ಯಾಪ್ತಿಯ ಎ ಮತ್ತು ಬಿ ವರ್ಗದ ಧಾರ್ಮಿಕ ಸಂಸ್ಥೆಗಳಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಾಯ್ದೆ ಕಲಂ 25 ರನ್ವಯ ಸ್ಥಳೀಯರನ್ನೊಳಗೊಂಡಂತೆ 09 ಜನ ಸದಸ್ಯರ ವ್ಯವಸ್ಥಾಪನಾ ಸಮಿತಿ ರಚಿಸಲಾಗುತ್ತದೆ. ಸದರಿ ಸಮಿತಿಯು ದೇವಾಲಯದ ವಾರ್ಷಿಕ ಆಯವ್ಯಯ ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವುದು ಇತ್ಯಾದಿಗಳ ಕುರಿತಂತೆ ಚರ್ಚಿಸಿ ನಿರ್ಣಯ ಕೈಗೊಳ್ಳುತ್ತದೆ.<br><br>ಅದರಂತೆ, ದೇವಾಲಯದ ನಿಧಿಯಲ್ಲಿ ಸಂಗ್ರಹವಾಗುವ ಹಣವನ್ನು ದೇವಾಲಯದ ನಿರ್ವಹಣೆಗೆ ನಿತ್ಯಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ/ಜೀರ್ಣೋದ್ಧಾರ ಮತ್ತು ಮೂಲಭೂತ ಸೌಕರ್ಯ ಹಾಗೂ ದೇವಾಲಯದ ವತಿಯಿಂದ ನಡೆಸುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997 ರ ಕಾಯ್ದೆ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದನ್ವಯ ಬಳಸಲಾಗುತ್ತಿದೆ. |

| ಪ್ರಶ್ನೆ | | ಉತ್ತರ |
|---|---|---|
| ಈ) | ದೇವಾಲಯಗಳ ನಿರ್ವಹಣೆಗೆ ಎಷ್ಟು ಹಣ ನೀಡಲಾಗುತ್ತಿದೆ; ನೀಡಲಾಗುವ ಹಣ ತೀರಾ ಕಡಿಮೆ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಹೆಚ್ಚು ಮಾಡಲು ಕ್ರಮ ಕೈಗೊಳ್ಳಲಾಗುವುದೇ? | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಕಲಂ 36(1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದಂತೆ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳ ನಿರ್ವಹಣೆಗೆ ಹಣವನ್ನು ಮಂಜೂರು ಮಾಡಲಾಗುತ್ತದೆ.<br><br>ಪ್ರವರ್ಗ 'ಸಿ' ದೇವಾಲಯದ ಅರ್ಚಕರಿಗೆ ಪ್ರಸಕ್ತ ಸರ್ಕಾರಿ ಆದೇಶ ಸಂಖ್ಯೆ: ಕಂಇ 142 ಮುಆಬಿ 2022, ದಿನಾಂಕ:11.04.2022ರ ಆದೇಶದಂತೆ, ವಾರ್ಷಿಕ ರೂ.60,000/-ಗಳ ತಸ್ತೀಕ್ ಮೊತ್ತವನ್ನು ಪರಿಷ್ಕರಿಸುವಂತೆ ಬೇಡಿಕೆ/ಪ್ರಸ್ತಾವನೆ ಸ್ವೀಕೃತವಾದ ಕಾರಣ 2025-26ನೇ ಸಾಲಿನ ಆಯವ್ಯಯ ಕಂಡಿಕೆ-435 ರಲ್ಲಿ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ 25,551 ಧಾರ್ಮಿಕ ಸಂಸ್ಥೆಗಳ/ದೇವಾಲಯಗಳಲ್ಲಿರುವ ಅರ್ಚಕರಿಗೆ ಪ್ರಸ್ತುತ ಪಾವತಿಸುತ್ತಿರುವ ವಾರ್ಷಿಕ ತಸ್ತೀಕ್ ಮೊತ್ತವನ್ನು ರೂ.60,000/-ಗಳಿಂದ ರೂ.72,000/-ಗಳಿಗೆ ಹೆಚ್ಚಿಸುವುದಾಗಿ ಘೋಷಿಸುವ ಮೂಲಕ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ 'ಸಿ' ದರ್ಜೆ ದೇವಸ್ಥಾನಗಳ ಅರ್ಚಕರುಗಳಿಗೆ ಅನುಕೂಲ ಮಾಡಿಕೊಡಲಾಗಿದೆ. |

ಸಂಖ್ಯೆ: ಕಂಇ 94 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು